ಕೋರಿಕೆಯ ಮೇಲೆ ವರ್ಗಾವಣೆಯಾದ ಅರಣ್ಯ ರಕ್ಷಕರುಗಳಿಗೆ, ಯಾವುದೇ ವರ್ಗಾವಣೆ ಭತ್ಯೆ ಮತ್ತು ಅನುದಾನ ನೀಡಲಾಗುವುದಿಲ್ಲ.

(5) ಬೆಳಗಾಂ ತಾಲ್ಲೂಕು ನೀಲಜಿ ಗ್ರಾಮದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಪ್ರಾರಂಭ ಮಾಡುವ ಬಗ್ಗೆ.

Sri. K. C. Modgekar Desai (Hirebagewadi):– The Zilla Parishad, Belgaum and the Taluka Panchayat Samithi, Belgaum, have long back resolved for opening of a new Rural Veterinary Dispensary at Nilaji, Taluka and District, Belgaum. I had raised this matter on the floor of the House and the Government had assured me that it would open new RVD at Nilaji. Accordingly, the Governmenmt sanctioned new RVD at Nilaji. However, nothing has been done so far in the matter. I would request the Government to make a Budgetary provision during the current year for opening of the new RVD at Nilaji, Taluka and District, Belgaum. The villagers have come forward to make available the land necessary for the establishment of a new RVD at Nilaji.

ಶ್ರೀ ಕೆ. ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ, ಬೆಳಗಾಂ ತಾಲ್ಲೂಕು, ನೀಲಜಿ ಗ್ರಾಮದಲ್ಲಿ ಒಂದು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ಇನ್ನೂ ದೊರಕಿರುವುದಿಲ್ಲ. ಸದರಿ ಗ್ರಾಮಕ್ಕೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(6) ದಾಜ್ಯದಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ರೈತರ ಜಮೀನಿನ ಸಕ್ರಮ.

ಶ್ರೀ ಜಿ. ರಾಜುಗೌಡ (ಹನೂರು):– ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ರಾಜ್ಯ ಸರ್ಕಾರವು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ರೈತರುಗಳ ಜಮೀನನ್ನು ಸಕ್ರಮಗೊಳಿಸಲು ತಾಲ್ಲೂಕು ಮಟ್ಟದ ಸಮಿತಿಯನ್ನು ಶಾಸಕರುಗಳ ಅಧ್ಯಕ್ಷತೆಯಲ್ಲಿ ನೇಮಿಸಿ ಕಾರ್ಯಾಚರಣೆ ಮಾಡುತ್ತಿರುವುದು ಸರಿಯಷ್ಟೆ. ಕೆಲವು ರೈತರುಗಳು ಬಹಳ ವರ್ಷಗಳಿಂದಲೂ ವ್ಯವಸಾಯ ಮಾಡಿಕೊಂಡು ಬಂದಿರುವ ಜಮೀನುಗಳು ಸರ್ಕಾರಿ ಕಡತದಲ್ಲಿ ರಸ್ತೆ, ಪರಂಪೋಕು, ಓಣಿ ಪರಂಪೋಕು, ಹಳ್ಳಿ ಪರಂಪೋಕು ಎಂದಿರುತ್ತದೆ. ಆದರೆ ಸಧ್ಯವಿರುವ ಪರಿಸ್ಥಿತಿಯಂತೆ ಅಲ್ಲಿ ಹಳ್ಳವೂ ಇಲ್ಲಾ, ರಸ್ತೆಯೂ ಇಲ್ಲಾ, ಓಣಿಯೂ ಇಲ್ಲಾ. ಆ ಜಮೀನನ್ನು ಸಕ್ರಮಗೊಳಿಸಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾಲ್ಲೂಕು ಮಟ್ಟದ ಕೆಲವು ಅಧಿಕಾರಿಗಳು ಇದನ್ನು ಮಾಡಿದರೆ ಸರ್ಕಾರದ ಸೂಚನೆಗೆ ವಿರೋಧವಾಗುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ಆ ಜಮೀನುಗಳನ್ನೇ ನಂಬಿ ಹತ್ತಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ಸಣ್ಣ ರೈತರುಗಳಿಗೆ ತೊಂದರೆಯಾಗುವುದಿಲ್ಲವ? ಆದ್ದರಿಂದ ಸ್ಥಳ ತನಿಖೆ ಮಾಡಿ ಯಾರಿಗೂ ತೊಂದರೆಯಾಗದಿದ್ದರೆ, ಅಂಥ ಜಮೀನನ್ನು ಸಕ್ರಮಗೊಳಿಸಬಹುದೆಂದು ಸರ್ಕಾರ ಸುತ್ತೋಲೆ ಕಳುಹಿಸುವುದರಿಂದ ಅನೇಕ ಜನ ಹರಿಜನರಿಗೂ ಹಿಂದುಳಿದವರಿಗೂ ಅನುಕೂಲವಾಗುತ್ತದೆ. ಸರ್ಕಾರದ ಸೂಚನೆಯಂತೆ ಯಾರು ಬಗೈರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅವರುಗಳನ್ನು ಒಕ್ಕಲೆಬ್ಬಿಸಬಾರದು ಎಂದು ಇದೆ. ಇಂಥ ಪರಿಸ್ಥಿತಿಯಲ್ಲಿ

ಅವರುಗಳು ಮಾಡುತ್ತಿರುವ ಜಮೀನುಗಳನ್ನು ಸಕ್ರಮಗೊಳಿಸುವುದರಿಂದ ಅಂಥ ರೈತರುಗಳ ಹಿತವನ್ನು ಕಾಪಾಡಿದಂತಾಗುವುದಿಲ್ಲವೆ ? ಸರ್ಕಾರಿ ತಡತವನ್ನು ನೋಡಿ ಸಕ್ರಮಗೊಳಿಸುವುದಾದರೆ, ಸಮಿತಿಯನ್ನು ನೇಮಿಸುವುದರ ಔಚಿತ್ಯವಾದರೂ ಏನು ? ಇದರ ಬಗ್ಗೆ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಂದಾಯ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, 1964ರ ಭೂ ಕಂದಾಯ ಕಾಯಿದೆ ಕಲಂ 71ರ ಪ್ರಕಾರ ವಿಶೇಷ ಉದ್ದೇಶಗಳಿಗಾಗಿ ಕಂದಾಯ ಇಲಾಖೆಯ ದಾಖಲಾತಿಗಳಲ್ಲಿ ನಮೂದಿಸಲಾಗಿರುವ ದೇವರ ಕಾಡು, ಗುಂಡು ತೋಪು, ಕೆರೆ ಅಂಗಳ, ಪೂಟು ಖರಾಬು, ಖರಾಬು ಹಳ್ಳ, ಸೇಂದಿ ವನ, ಸ್ಮಶಾನದ ಜಮೀನುಗಳನ್ನು, 1964ರ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 94 ಎ ಅಡಿಯಲ್ಲಿ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ರೂಪಿಸಲಾದ ಕಾನೂನು ಪ್ರಕಾರ ತಾಲ್ಲೂಕು ಮಟ್ಟದ ಸಮಿತಿಗಳಿಗೆ ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ. ಹಾಗೆಯೇ, ಸಾರ್ವಜನಿಕ ರಸ್ತೆ, ಕಾಲು ದಾರಿ, ಗಾಡಿ ರಸ್ತೆ, ಮುಂತಾದವುಗಳನ್ನು ಸಮಿತಿಗಳು ಮಂಜೂರು ಮಾಡಲು ಸಹ ಇರುವುದಿಲ್ಲ. ಆದುದರಿಂದ, ಇಂತಹ ಜಮೀನುಗಳು ಬಗರ್‌ಹುಕುಂ ಸಾಗುವಳಿಯಲ್ಲಿದ್ದರೂ ಸಹಾ, ಸಮಿತಿಗಳು ಮಂಜೂರು ಮಾಡಲು ನಿಷೇಧವಿದೆ.

ಆದಾಗ್ಯೂ, ಇಂತಹ ಜಮೀನುಗಳು ಅವುಗಳ ಲಕ್ಷಣಗಳನ್ನು ಕಳೆದುಕೊಂಡಾಗ ಹಾಗೂ ಸದೋಜಿತ ಉದ್ದೇಶಕ್ಕೆ ಉಪಯೋಗವಿಲ್ಲದಿದ್ದಾಗ ಅಂತಹ ಜಮೀನುಗಳನ್ನು ಕಾನೂನಿನ ಪ್ರಕಾರ ಮೀಸಲಾತಿಯಿಂದ ಹೊರತುಪಡಿಸಲು ಅವಕಾಶವಿದೆ. ಈ ರೀತಿ ಹೊರತುಪಡಿಸಲಾದ ಜಮೀನುಗಳನ್ನು ಕಾನೂನಿನ ಅಡಿಯಲ್ಲಿ ವಾಪಸ್ಸು ಪಡೆಯಲು ಪರಿಶೀಲಿಸಲಾಗುವುದು. ಬೇರೆ ಉದ್ದೇಶಕ್ಕೆ ಹಸ್ತಾಂತರಿಸುವ ಅಧಿಕಾರವು ಸರಕಾರಕ್ಕೆ ಮಾತ್ರ ಇರುತ್ತದೆ. ಆದ್ದರಿಂದ, ಅಂತಹ ಹಸ್ತಾಂತರಿಸಲಾಗಿರುವ ಜಮೀನುಗಳನ್ನ ಅರ್ಹ ಉದ್ದೇಶಗಳಿಗೆ ವಿಲ್ ಮಾಡಲು ಪರಿಶೀಲಿಸಲಾಗುವುದು.

(7) ಮಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಕ.ರಾ.ರ. ಸಾರಿಗೆ ಇಲಾಖೆಯ ಎಕ್ಸ್‌ಪ್ರೆಸ್ ಮತ್ತು ನಾನ್ ಸ್ಟಾಪ್ ಸರ್ವೀಸ್ ಬಸ್.

ಶ್ರೀ ಎ. ರುಕ್ಮಯ್ಯಪೂಜಾರಿ(ಪಿಟ್ಲ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಇಲಾಖೆಯ ಎಕ್ಸ್‌ಪ್ರೆಸ್ ಮತ್ತು ನಾನ್‌ಸ್ಟಾಪ್ ಸರ್ವೀಸಿನ ಬಸ್ಸುಗಳು ಗ್ರಾಮಾಂತರ ಪ್ರದೇಶದ ಹೆಚ್ಚಿನ ಜನರಿಗೆ ಅನುಕೂಲವಾಗುವಂತೆ ಪಾಣೆ ಮಂಗಳೂರು, ಕಲ್ಲಡ್ಕ ಮತ್ತು ಮಾಣಿಗಳಲ್ಲಿ ನಿಲ್ಲಿಸಬೇಕೆಂದು ಊರಿನವರು ಮನವಿ ಸಲ್ಲಿಸಿದ್ದರೂ ಮತ್ತು ಜನಪ್ರತಿನಿಧಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಿದ್ದರೂ ಸರಿಯಾದ ಕ್ರಮ ತೆಗೆದುಕೊಂಡಿರುವುದಿಲ್ಲ. ಕೆಲವು ಬಸ್ಸುಗಳನ್ನು ನಿಲ್ಲಿಸಬೇಕೆಂದು ಸೂಚಿಸಿದ್ದರೂ ನಿಲ್ಲಿಸುವುದಿಲ್ಲ. ಇದರಿಂದ ಆಸುಪಾಸಿನ ಜನ ಪದೇ ಪದೇ ಒತ್ತಾಯಿಸುತ್ತಾ ಇದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಗೆ ಲಾಭವಾಗುವ ಮತ್ತು ಜನಸಾಮಾನ್ಯರಿಗೆ ಅನುಕೂಲವಾಗುವ ದೃಷ್ಟಿಯಿಂದ ಇಂಥ ಬಸ್ಸುಗಳು ಪಾಣೆ ಮಂಗಳೂರು ಕಲ್ಲಡ್ಕ, ಮತ್ತು ಮಾಣಿ ನಿಲ್ದಾಣಗಳಲ್ಲಿ ನಿಲ್ಲುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

† ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಾರಿಗೆ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, Pane Mangalore Kalladaka and Mani are situated on National Highway 48 (Mangalore-Bangalore via Sakaleshpur) and they are at a distance of 25, 30, and 35 KMs from Mangalore.